# ಕೋವಿಡ್ -19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಒಣ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಗಳು

## ಒಣ ತ್ಯಾಜ್ಯ ಸಂಸ್ಕರಣಾ ಕೇಂದ್ರದಲ್ಲಿ ತೆಗೆದುಕೊಳ್ಳಬೇಕಾದ ಕಾಳಜಿ




ತ್ಯಾಜ್ಯ ಸಂಸ್ಕರಣಾ ಘಟಕದ ಪ್ರವೇಶದ್ವಾರದಲ್ಲಿ ಕೈ ನೈರ್ಮಲ್ಯ ಅಥವಾ ಕೈತೊಳೆಯುವ ಕೇಂದ್ರ ಅಳವಡಿಸಬೇಕು.




ತ್ಯಾಜ್ಯ ಸಂಸ್ಕರಣಾ ಕೇಂದ್ರವನ್ನು, ಕೆಲಸದ ನಂತರ ಪ್ರತಿದಿನ ಸಂಜೆ ಸ್ವಚ್ಛಗೊಳಿಸಬೇಕು ಮತ್ತು ಸೋಂಕು ರಹಿತ ಗೊಳಿಸಬೇಕು



ಕೇಂದ್ರವನ್ನು ಸ್ವಚ್ಛಗೊಳಿಸುವ ಮೊದಲು ಸಿಬ್ಬಂದಿಯು ರಬ್ಬರ್ ಬೂಟುಗಳು, ಭಾರವಾದ ಹೊರೆ ತೆಗೆದುಕೊಳ್ಳುವ ಕೈಗವಸುಗಳು ಮತ್ತು ಮೂರು-ಪದರದ ಮಾಸ್ಕ್ ಅನ್ನು ಧರಿಸಬೇಕು



ಸಂಪರ್ಕಕ್ಕೆ ಬರುವಂತಹ ಬಾಗಿಲುಗಳು, ಕಿಟಕಿಗಳು, ಕೀಲಿಕೈಗಳು, ಭದ್ರತಾ ಬೀಗಗಳು, ಕೀಲಿಗಳು ಇತ್ಯಾದಿಗಳನ್ನು ಸೋಪ್ ನೀರು ಅಥವಾ ಆಲ್ಕೋಹಾಲ್ ಆಧಾರಿತ ದ್ರಾವಣದಿಂದ ಸ್ವಚ್ಛಗೊಳಿಸಬೇಕು.




1% ಸೋಡಿಯಂ ಹೈಪೋಕ್ಲೋರೈಟ್ ಅಥವಾ ಫೀನಾಲಿಕ್ಸ್ ಸೋಂಕು ನಿವಾರಕ ಹೊಂದಿರುವ ಸೋಂಕು ನಿವಾರಕಗಳನ್ನು ಬಳಸಿ ನೆಲವನ್ನು ಸೋಂಕು ರಹಿತ ಗೊಳಿಸಬೇಕು.



ಕೇಂದ್ರದಲ್ಲಿ ಬಳಸುವ ಎಲ್ಲಾ ಉಪಕರಣಗಳನ್ನು, ದಿನಕ್ಕೆ ಎರಡು ಬಾರಿ 1% ಸೋಡಿಯಂ ಹೈಪೋಕ್ಲೋರೈಟ್ ಅಥವಾ ಆಲ್ಕೋಹಾಲ್ ಆಧಾರಿತ ದ್ರಾವಣದಲ್ಲಿ ನೆನೆಸಿದ ಲಿನಿನ್ / ಹೀರಿಕೊಳ್ಳುವ ಬಟ್ಟೆಯಿಂದ ಸ್ವಚ್ಛಗೊಳಿಸಬೇಕು.



ಸ್ವಚ್ಛಗೊಳಿಸುವ ಕಾರ್ಯಾಚರಣೆಯ ನಂತರ, ಬಳಸಿದ ವಿಲೇವಾರಿ ಮಾಡಬಹುದಾದ ಪಿಪಿಇ ಅನ್ನು ಹಳದಿ ಚೀಲದಲ್ಲಿ ತ್ಯಜಿಸಬೇಕು. ಮರುಬಳಕೆ ಮಾಡಬಹುದಾದ ಮಾಸ್ಕ್ ಗಳು, ಕೈಗವಸುಗಳು ಮತ್ತು ಬೂಟುಗಳನ್ನು ಬೆಚ್ಚಗಿನ ಸಾಬೂನು ನೀರಿನಿಂದ ಚೆನ್ನಾಗಿ ತೊಳೆದು, ಕನಿಷ್ಠ ಅರ್ಧ ದಿನ ಬಿಸಿಲಿನಲ್ಲಿ ಒಣಗಲು ಬಿಡಬೇಕು.

## ತ್ಯಾಜ್ಯವನ್ನು ಸಂಗ್ರಹಿಸುವಾಗ ಮತ್ತು ವಿಂಗಡಿಸುವಾಗ ತೆಗೆದುಕೊಳ್ಳಬೇಕಾದ ಕಾಳಜಿ




ತ್ಯಾಜ್ಯ ಸಂಗ್ರಹಣೆಯ ನಂತರ, ಪ್ರತಿದಿನದ ತ್ಯಾಜ್ಯವನ್ನು ಕೇಂದ್ರದಲ್ಲಿ ಸಂಗ್ರಹಿಸುವಾಗ, ಚೀಲದ ಮೇಲೆ ಅಥವಾ ನೆಲದ ಮೇಲೆ ದಿನಾಂಕದೊಂದಿಗೆ ಗುರುತಿಸಿ ಇಡಬೇಕು.




ತ್ಯಾಜ್ಯವನ್ನು ಸಾಧ್ಯವಾದಷ್ಟು ದಿನಗಳವರೆಗೆ, ಕನಿಷ್ಠ 4 ದಿನಗಳವರೆಗೆ ಮುಟ್ಟದೆ / ತೆರೆಯದೆ ಸಂಗ್ರಹಿಸಬೇಕು




ತ್ಯಾಜ್ಯ ವಿಂಗಡಣೆಗಾಗಿ 'ಮೊದಲು ಒಳಗೆ ಮೊದಲು ಓರಗೆ' ಅಭ್ಯಾಸವನ್ನು ಅನುಸರಿಸಬೇಕು; ಪ್ರತಿದಿನ, ಕನಿಷ್ಠ 4 ದಿನಗಳಷ್ಟು ಹಳೆಯದಾದ ತ್ಯಾಜ್ಯವನ್ನು ವಿಂಗಡಿಸಬೇಕು. ಸಾಧ್ಯವಾದರೆ, ಹೆಚ್ಚಿನ ಶಾಖದ ಮೂಲಕ ವೈರಸ್ ಅನ್ನು ಕೊಲ್ಲಲು, ತ್ಯಾಜ್ಯವನ್ನು ಬಿಸಿಲಿನಲ್ಲಿ ಇರಿಸಿ.




ತ್ಯಾಜ್ಯ ವಿಂಗಡಿಸುವ ಸ್ಥಳವನ್ನು ಚೆನ್ನಾಗಿ ಗಾಳಿಯಾಡುವಂತೆ ನೋಡಿಕೊಳ್ಳಬೇಕು.